**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತನೆಯ ಅಧಿವೇಶನ**

# ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–10)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾನ್ಲಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 95ರ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12)ರ 95ನೇ ಪ್ರಕರಣದ (2)ನೇ ಉಪಪ್ರಕರಣದ (i) ಮತ್ತು (ii)ನೇ ಉಪಖಂಡಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(i) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳ ಮೇರೆಗೆ ಸಂಬಂಧಪಟ್ಟ ಭೂಮಿಯ ಸಂಬಂಧದಲ್ಲಿ ಯುಕ್ತವಾಗಿ ಪ್ರಕಟಿಸಲಾದ ಮಾಸ್ಟರ್ ಪ್ಲಾನ್‌ನಲ್ಲಿ ನಿರ್ದಿಷ್ಟಪಡಿಸಿದ ಬಳಕೆಗೆ ಅನುಸಾರವಾಗಿ ಅಂಥ ಭೂಮಿಯು ಕಂದಾಯ ನಿರ್ಧರಣೆಯಾಗಿದ್ದು ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿದ್ದಲ್ಲಿ, ಕೃಷಿಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆಗೆ ಡೆಪ್ಯುಟಿ ಕಮಿಷನರ ಅನುಮತಿಯ ಅಗತ್ಯವಿರುವುದಿಲ್ಲ:

ಪರಂತು, ಪ್ರಾಧಿಕಾರದಿಂದ ಅಗತ್ಯ ಅನುಮತಿಯನ್ನು ಪಡೆಯುವ ಸಮಯದಲ್ಲಿ ನಗರ ಯೋಜನಾ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ಸ್ವಯಂ ಘೋಷಣೆಯೊಂದಿಗೆ ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

(ii) ಕಂದಾಯ ನಿರ್ಧರಣೆಯಾಗಿರುವ ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಯಾರೇ ಅಧಿಭೋಗದಾರನು ಮಾಸ್ಟರ್ ಪ್ಲಾನ್ ಪ್ರಕಟಿಸದಿರುವಂಥ ಸ್ಥಳೀಯ ಯೋಜನಾ ಪ್ರದೇಶದ ಹೊರಗಿರುವ ಅಂಥ ಭೂಮಿಯನ್ನು ಅಥವಾ ಅದರ ಭಾಗವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಪರಿವರ್ತಿಸಲು

ಬಯಸಿದಲ್ಲಿ, ಅರ್ಜಿದಾರನು ನಿಯಮಿಸಬಹುದಾದಂಥ ರೀತಿಯಲ್ಲಿ ಡೆಪ್ಯುಟಿ ಕಮಿಷನರ್‌ಗೆ ಅಫಿಡಾವಿಟ್‌ನೊಂದಿಗೆ ಅರ್ಜಿಯನ್ನು ಸಲ್ಲಿತಕ್ಕದ್ದು.

ಸಂಬಂಧಪಟ್ಟ ಪ್ರಾಧಿಕಾರಗಳು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ತಮ್ಮ ಅಭಿಪ್ರಾಯವನ್ನು ಒದಗಿಸತಕ್ಕದ್ದು. ಡೆಪ್ಯುಟಿ ಕಮಿಷನರನು ಸಂಬಂಧಪಟ್ಟ ಪ್ರಾಧಿಕಾರಗಳು ಒದಗಿಸಿದ ಅಭಿಪ್ರಾಯಗಳಿಗೊಳಪಟ್ಟು ಮತ್ತು ಉಪಪ್ರಕರಣ (7)ರಡಿಯಲ್ಲಿ ನಿಯಮಿಸಲಾದ ಶುಲ್ಕ ಪಾವತಿಗೊಳಪಟ್ಟು, ಅರ್ಜಿಯನುಸಾರವಾಗಿ ಭೂ ಪರಿವರ್ತನೆಗೆ ಅನುಮೋದನೆಯನ್ನು ನೀಡತಕ್ಕದ್ದು:

ಪರಂತು, ಪ್ರಾಧಿಕಾರಗಳು ಸದರಿ ಹದಿನೈದು ದಿನಗಳೊಳಗೆ ಯಾವುದೇ ಅಭಿಪ್ರಾಯ ಸಲ್ಲಿಸದಿರುವ ಸಂದರ್ಭದಲ್ಲಿ, ಅರ್ಜಿಗನುಸಾರ ಸದರಿ ಭೂ ಬಳಕೆ ಬದಲಾವಣೆಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸತಕ್ಕದ್ದು:

ಮತ್ತು ಪರಂತು, ಡೆಪ್ಯುಟಿ ಕಮಿಷನರನು ಅರ್ಜಿಯ ಸ್ವೀಕೃತಿಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಬಗ್ಗೆ ತನ್ನ ತೀರ್ಮಾನವನ್ನು ನೀಡಲು ಮತ್ತು ಈ ಉಪಪ್ರಕರಣದ ಅಡಿಯಲ್ಲಿಆದೇಶವನ್ನು ಹೊರಡಿಸಲು ವಿಫಲನಾದ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರನು ಭೂ ಬಳಕೆ ಬದಲಾವಣೆಗಾಗಿ ಅನುಮೋದನೆಯನ್ನು ನೀಡಿದ್ದಾರೆಂದು ಭಾವಿಸತಕ್ಕದ್ದು ಮತ್ತು ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕದ ಸಂದಾಯಕ್ಕೆ ಒಳಪಟ್ಟು ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ಪ್ರಮಾಣೀಕರಿಸತಕ್ಕದ್ದು ಮತ್ತು ಹೊರಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

2023-2024ರ ವರ್ಷದ ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಜಾರಿಗೆ ತರಲು ಮತ್ತು ಸ್ವಯಂ-ಘೋಷಣೆಯ ಮೂಲಕ ಕೃಷಿಯೇತರ ಉದ್ದೇಶಕ್ಕಾಗಿ ಕೃಷಿ ಭೂಮಿಯ ಪರಿವರ್ತನೆಯನ್ನು ಸಾಧ್ಯಗೊಳಿಸುವುದಕ್ಕಾಗಿ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 95ನೇ ಪ್ರಕರಣವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 2** | ಈ ಖಂಡದ ಅಡಿಯಲ್ಲಿ ಪ್ರತಿಯೋಜಿಸಲು ಉದ್ದೇಶಿಸಿರುವ 95ನೇ ಪ್ರಕರಣದ ಉಪಪ್ರಕರಣ (2)ರ (i) ಮತ್ತು (ii) ಖಂಡಗಳು,-<br><br>(ಎ) (2)ನೇ ಉಪಪ್ರಕರಣದ (i)ನೇ ಖಂಡದ ಪರಂತುಕವು, ಸ್ವಯಂ-ಘೋಷಣೆಯನ್ನು ಸಲ್ಲಿಸುವ ವಿಧಾನದ ಕುರಿತು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ;<br><br>(ಬಿ) (2)ನೇ ಉಪಪ್ರಕರಣದ (ii)ನೇ ಖಂಡವು, ಕಂದಾಯ ನಿರ್ಧರಣೆಯಾಗಿರುವ ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಭೋಗದಾರನು ಯಾವುದೇ ಇತರ ಉದ್ದೇಶಕ್ಕಾಗಿ ಪರಿವರ್ತಿಸಲು ಬಯಸುವ ಅಂಥ ಭೂಮಿ ಅಥವಾ ಅದರ ಭಾಗವು ಮಾಸ್ಟರ್ ಪ್ಲಾನ್ ಪ್ರಕಟಿಸದಿರುವಂಥ ಸ್ಥಳೀಯ ಯೋಜನಾ ಪ್ರದೇಶದ ಹೊರಗಿದ್ದಲ್ಲಿ, ಡೆಪ್ಯುಟಿ ಕಮಿಷನರ್‌ಗೆ ಅಫಿಡಾವಿಟ್ ಮತ್ತು ಅರ್ಜಿಯನ್ನು ಸಲ್ಲಿಸುವ ವಿಧಾನದ ಕುರಿತು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ
## ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ
## (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12)ಉದ್ಧೃತ ಭಾಗ

**X X XX XX**

**95. ಬೇಸಾಯದ ಭೂಮಿಯ ಬಳಕೆಗಳು ಮತ್ತು ಬೇಸಾಯದ ಭೂಮಿಯನ್ನು ಇತರ ಉದ್ದೇಶಕ್ಕಾಗಿ ಬಳಸುವ ಬಗೆಗಿನ ವಿಧಾನ.**- (1) ಕಟ್ಟಡಗಳನ್ನು ಕಟ್ಟುವ ಅಥವಾ ಬಾವಿಗಳನ್ನು ಅಥವಾ ಕೆರೆಗಳನ್ನು ನಿರ್ಮಿಸುವ ಬಗ್ಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು, ಕಂದಾಯದ ನಿರ್ಧರಣೆಯಾದ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಭೋಗದಾರನು, ಆ ಭೂಮಿಯನ್ನು ಉತ್ತಮವಾಗಿಸಾಗುವಳಿ ಮಾಡಲು ಅಥವಾ ಮೇಲೆ ಹೇಳಿದ ಉದ್ದೇಶಕ್ಕಾಗಿ ಆ ಭೂಮಿಯನ್ನು ಹೆಚ್ಚು ಅನುಕೂಲಕರವಾಗಿ ಬಳಕೆ ಮಾಡುವುದಕ್ಕಾಗಿ, ತಾನೇ ಖುದ್ದಾಗಿ ಫಾರಂ ಕಟ್ಟಡಗಳನ್ನು ಕಟ್ಟಲು, ಬಾವಿ ಅಥವಾ ಕೆರೆಗಳನ್ನು ನಿರ್ಮಿಸಲು, ಬೇರೆ ಯಾವುದೇ ಸುಧಾರಣೆಗಳನ್ನು ಮಾಡಲು ಅಥವಾ ತನ್ನ ನೌಕರರಿಂದ, ಗೇಣಿದಾರರಿಂದ, ಏಜೆಂಟರಿಂದ ಅಥವಾ ಇತರ ಕಾನೂನುಸಮ್ಮತ ಪ್ರತಿನಿಧಿಗಳಿಂದ ಫಾರಂ ಕಟ್ಟಡಗಳನ್ನು ಕಟ್ಟಿಸಲು, ಬಾವಿ ಅಥವಾ ಕೆರೆಗಳನ್ನು ನಿರ್ಮಿಸಿಕೊಳ್ಳಲು ಅಥವಾ ಬೇರೆ ಯಾವುದೇ ಸುಧಾರಣೆಗಳನ್ನು ಮಾಡಿಸಲು ಹಕ್ಕುಳ್ಳವನಾಗಿರುತ್ತಾನೆ.

ಪರಂತು, ಭೂಮಿಗೆ ನಿಯಮಿಸಬಹುದಾದಂಥ ಗರಿಷ್ಠ ವಿಸ್ತೀರ್ಣಕ್ಕೆ ಒಳಪಟ್ಟು, ಹಾಗೆ ಕಟ್ಟಿದ ಫಾರಂ ಕಟ್ಟಡವು ಅಥವಾ ಫಾರಂ ಹೌಸ್ ಆತನ ಹಿಡುವಳಿಯ ಶೇಕಡ ಹತ್ತಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ.

**ವಿವರಣೆ.-** ಈ ಉಪಪ್ರಕರಣದ ಉದ್ದೇಶಕ್ಕಾಗಿ "ಫಾರಂ ಕಟ್ಟಡ" ಅಥವಾ "ಫಾರಂ ಹೌಸ್" ಎಂದರೆ, ರೈತನ ವಸತಿಗಾಗಿ ಬಳಸಿದ ಅಥವಾ ಕೃಷಿ ಪರಿಕರಗಳನ್ನು ಇಡುವ ಉದ್ದೇಶಕ್ಕಾಗಿ ಬಳಸಿದ ಮತ್ತು ಜಾನುವಾರುಗಳನ್ನು ಕಟ್ಟಿಹಾಕಲು ಬಳಸಿದ ಜಮೀನಿಗೆ ಹೊಂದಿಕೊಂಡಿರುವ ಅಥವಾ ಕೃಷಿ ಭೂಮಿಯ ಒಂದು ಭಾಗದಲ್ಲಿ ನಿರ್ಮಿಸಿದ ಮನೆ ಮತ್ತು ಈ ಮನೆಯನ್ನು ರೈತನು ತನ್ನ ಸ್ವಂತ ಉಪಯೋಗಕ್ಕಾಗಿ ಬಳಸತಕ್ಕದ್ದು ಹಾಗೂ ಅದನ್ನು ಯಾವುದೇ ವ್ಯಕ್ತಿಯ ಅಥವಾ ಏಜೆನ್ಸಿಯ ವಾಣಿಜ್ಯ ಚಟುವಟಿಕೆಗಳಿಗೆ ನೀಡತಕ್ಕದ್ದಲ್ಲ.

(2) ಕಂದಾಯದ ನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಭೋಗದಾರನು ಅಂಥ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಬದಲಿಸಲು ಇಚ್ಛಿಸಿದರೆ, ಆತನು ನೇಮಿಸಬಹುದಾದಂಥ ರೀತಿಯಲ್ಲಿ ಒಂದು ಅಫಿಡಾವಿಟ್ ಜೊತೆಗೆ ಜಿಲ್ಲಾಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು,-

(i) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳ ಮೇರೆಗೆ ಸಂಬಂಧಪಟ್ಟ ಭೂಮಿಯ ಸಂಬಂಧದಲ್ಲಿ ಯುಕ್ತವಾಗಿ ಪ್ರಕಟಿಸಲಾದ ಮಾಸ್ಟರ್ ಪ್ಲಾನ್‌ನಲ್ಲಿ ನಿರ್ದಿಷ್ಟಪಡಿಸಿದ ಬಳಕೆಗೆ ಅನುಸಾರವಾಗಿ ಬದಲಾವಣೆಯನ್ನು ಕೋರಿದರೆ ಆಗ ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕದ ಪಾವತಿಗೆ ಒಳಪಟ್ಟು ಅದನ್ನು ಬದಲಾಯಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅರ್ಜಿಯ ಸ್ವೀಕೃತಿಯ ದಿನಾಂಕದಿಂದ ಏಳು ದಿನಗಳೊಳಗಾಗಿ ಅದಕ್ಕನುಸಾರವಾಗಿ ಅನುಮೋದನೆ ಆದೇಶವನ್ನು ಹೊರಡಿಸತಕ್ಕದ್ದು:

ಪರಂತು, ಜಿಲ್ಲಾಧಿಕಾರಿಯು ಅರ್ಜಿಯ ಸ್ವೀಕೃತಿಯ ದಿನಾಂಕದಿಂದ ಏಳು ದಿನಗಳೊಳಗಾಗಿ ತನ್ನ ನಿರ್ಣಯವನ್ನು ನೀಡಲು ಮತ್ತು ಈ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಲು ವಿಫಲನಾದ ಸಂದರ್ಭದಲ್ಲಿ ಜಿಲ್ಲಾಧಿಕಾರಿಯು ಭೂ ಬಳಕೆ ಬದಲಾವಣೆಗಾಗಿ ಅನುಮೋದನೆಯನ್ನು ನೀಡಿದ್ದಾರೆಂದು ಭಾವಿಸತಕ್ಕದ್ದು ಮತ್ತು ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕದ ಸಂದಾಯದ ತರುವಾಯ ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ಪ್ರಮಾಣೀಕರಿಸತಕ್ಕದ್ದು ಮತ್ತು ಹೊರಡಿಸತಕ್ಕದ್ದು.

(ii) ಮಾಸ್ಟರ್ ಪ್ಲಾನನ್ನು ಪ್ರಕಟಿಸದಿರುವ ಸಂದರ್ಭದಲ್ಲಿ ಅಥವಾ ಭೂಮಿಯು ಸ್ಥಳೀಯ ಯೋಜನಾ ಪ್ರದೇಶದ ಹೊರಗೆ ಬರುವಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ತಮ್ಮ ಅಭಿಪ್ರಾಯವನ್ನು ಸಲ್ಲಿಸತಕ್ಕದ್ದು. ಜಿಲ್ಲಾಧಿಕಾರಿಯು ಉಪಪ್ರಕರಣ (7) ರ ಅಡಿಯಲ್ಲಿ ನಿಯಮಿಸಲಾದ ಶುಲ್ಕದ ಸಂದಾಯಕ್ಕೆ ಒಳಪಟ್ಟು, ಸಂಬಂಧಪಟ್ಟ ಪ್ರಾಧಿಕಾರಗಳು ಸಲ್ಲಿಸಿದ ಅಭಿಪ್ರಾಯಕ್ಕೆ ಒಳಪಟ್ಟು ಅರ್ಜಿಯ ಅನುಸಾರ ಭೂ ಬಳಕೆ ಬದಲಾವಣೆಗಾಗಿ ಅನುಮೋದನೆಯನ್ನು ನೀಡತಕ್ಕದ್ದು:

ಪರಂತು, ಪ್ರಾಧಿಕಾರಗಳು ಸದರಿ ಹದಿನೈದು ದಿನಗಳೊಳಗೆ ಯಾವುದೇ ಅಭಿಪ್ರಾಯ ಸಲ್ಲಿಸದಿರುವ ಸಂದರ್ಭದಲ್ಲಿ, ಅರ್ಜಿಗನುಸಾರ ಸದರಿ ಭೂ ಬಳಕೆ ಬದಲಾವಣೆಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸತಕ್ಕದ್ದು:

ಮತ್ತು ಪರಂತು, ಜಿಲ್ಲಾಧಿಕಾರಿಯು, ಅರ್ಜಿಯ ಸ್ವೀಕೃತಿಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಬಗ್ಗೆ ತನ್ನ ತೀರ್ಮಾನವನ್ನು ನೀಡಲು ಮತ್ತು ಆದೇಶವನ್ನು ಹೊರಡಿಸಲು ವಿಫಲನಾದ ಸಂದರ್ಭದಲ್ಲಿ ಜಿಲ್ಲಾಧಿಕಾರಿಯು ಭೂ ಬಳಕೆ ಬದಲಾವಣೆಗಾಗಿ ಅನುಮೋದನೆಯನ್ನು ನೀಡಿದ್ದಾರೆಂದು ಭಾವಿಸತಕ್ಕದ್ದು ಮತ್ತು ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕದ ಸಂದಾಯಕ್ಕೆ ಒಳಪಟ್ಟು ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ಪ್ರಮಾಣೀಕರಿಸತಕ್ಕದ್ದು ಮತ್ತು ಹೊರಡಿಸತಕ್ಕದ್ದು.

**X X XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 300, 19ನೇ ಜುಲೈ, 2023

**KARNATAKA LEGISLATIVE COUNCIL**
**ONE HUNDRED FIFTIETH SESSION**

# THE KARNATAKA LAND REVENUE (AMENDMENT) BILL, 2023

**(LA Bill No. 10 of 2023)**

**(As passed by the Karnataka Legislative Assembly)**

A Bill further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964), for the purposes hereinafter appearing;

Be it enacted by the Karnataka State Legislature in the Seventy fourth year of the Republic of India, as follows:-

**1. Short title and Commencement.-** (1) This Act may be called the Karnataka Land Revenue (Amendment) Act, 2023.

(2) It shall come into force on such date as the State Government may, by notification, appoint.

**2. Amendment of Section 95.-** In the Karnataka Land Revenue Act, 1964 (Karnataka Act 12 of 1964), for clauses (i) and (ii) of sub-section (2) of section 95, the following shall be substituted, namely:-

"(i) The permission of the Deputy Commissioner shall not be required for diversion of lands for non-agricultural purposes, if such lands assessed or held for the purpose of agriculture, is as per the land use as specified in the Master Plan duly published, for the concerned land under the provisions of the Karnataka Town and Country Planning Act, 1961(Karnataka Act 11 of 1963):

Provided that, the prescribed fee under sub-section (7) shall be paid to the concerned Town Planning Authority at the time of obtaining requisite permissions from the Authority along with self declaration as may be prescribed.

(ii) If any occupant of a land assessed or held for the purpose of agriculture wishes to divert such land or any part thereof to any other purpose and if such lands are falling outside the Local

Planning Area for which the Master Plan has not been published, the applicant shall submit an affidavit along with an application to the Deputy Commissioner in such manner as may be prescribed.

The concerned authorities shall furnish their opinion within fifteen days from the date of receipt of the application. The Deputy Commissioner shall issue the approval for diversion for use as per the application, subject to the opinion furnished by the concerned authorities and subject to payment of the fee as prescribed under sub-section (7):

Provided that, if opinion is not furnished within the said period of fifteen days, it shall be deemed that the concerned authorities have no objection to the said diversion of land for use as per the application.

Provided further that, in case the Deputy Commissioner fails to give his decision and issues the order under this sub-section within thirty days from the date of receipt of the application, the approval of the diversion for use shall be deemed to have been granted by the Deputy Commissioner and the same shall be certified and issued in such manner as may be prescribed subject to payment of fee as prescribed under sub-section (7)."

## STATEMENT OF OBJECTS AND REASONS

**(As appended to at the time of Introduction)**

It is considered necessary further to amend section 95 of the Karnataka Land Revenue Act, 1964 (Karnataka Act 12 of 1964) to give effect to the proposals made in the Budget Speech for the year 2023-2024 and to enable conversion of agricultural land for non agricultural purpose by way of self-declaration.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| **Clause 2:** | Clauses (i) and (ii) of sub-section (2) of section 95 sought to be substituted under this clause empowers the State Government as follows,-<br>(a) proviso to clause (i) of sub-section 2 empowers the State Government to prescribe the manner regarding submission of self-declaration;<br>(b) clause (ii) of sub-section 2 empowers the State Government to prescribe the manner in which an affidavit and application shall be submitted to the Deputy Commissioner by an occupant of a land assessed or held for the purpose of agriculture who wishes to divert such land or any part thereof to any other purpose if such lands are falling outside the Local Planning Area for which Master Plan has not been published. |

The proposed delegation of legislative power is normal in character.

**KRISHNA BYREGOWDA**
Minister for Revenue

**K.R. MAHALAKSHMI**
Secretary
Karnataka Legislative Council

**ANNEXURE**

**EXTRACT FROM THE KARNATAKA LAND REVENUE ACT, 1964**

**(Karnataka Act 12 of 1964)**

**XXX XXX XXX**

**95. Uses of agricultural land and the procedure for use of agricultural land for other purpose.-** (1) Subject to any law for the time being in force regarding erection of buildings or construction of wells or tanks, an occupant of land assessed or held for the purpose of agriculture is entitled by himself, his servants, tenants, agents, or other legal representatives, to erect farm buildings, construct wells or tanks, or make any other improvements thereon for the better cultivation of the land or its more convenient use for the purpose aforesaid.

Provided that the farm Building or farm House so erected shall not be more than ten percent of his holding subject to maximum of such extent of land as may be prescribed.

**Explanation.-** For the purpose of this sub-section "Farm Buildings" or "Farm house" means a house attached to a farm and constructed in a portion of an agricultural land, used for the residence of the agriculturist or used for the purpose of keeping agricultural equipments and tethering cattle. The house shall be used by farmer for his own use and it shall not be let out for commercial activities to any individual or agency.

(2) If any occupant of a land assessed or held for the purpose of agriculture wishes to divert such land or any part thereof to any other purpose, he shall submit an affidavit along with an application to the Deputy Commissioner in the manner as may be prescribed and if the diversion is sought,-

(i) In accordance with the use specified in the Master Plan duly published for the concerned land under the provisions of the Karnataka Town and Country Planning Act, 1961 (Karnataka Act 11 of 1963), then the same shall be deemed to have been diverted subject to payment of prescribed fee under sub-section (7) and the Deputy Commissioner shall issue the order of approval accordingly within seven days from the date of receipt of the application:

Provided that, in case the Deputy Commissioner fails to give his decision and issue the order under this sub-section within fifteen days from the date of receipt of the application, the approval for diversion for use shallbe deemed to have been granted by the Deputy Commissioner and the sameshall be certified and issued, after payment of fee prescribed under sub-section (7), in the manner as may be prescribed.

(ii) In case the Master Plan has not been published or the land is falling outside the local planning area, then the concerned authorities shall furnish their opinion within fifteen days from the date of receipt of the application. The Deputy Commissioner shall issue the approval for diversion for use as per the application, subject to the opinion furnished by the concerned authorities and subject to payment of the fee prescribed under sub-section (7):

Provided that, in case no opinion is furnished within the said period of fifteen days, it shall be deemed that the concerned authorities have no objection to the said diversion of land for use as per the application.

Provided further that, in case the Deputy Commissioner fails to give his decision and issue the order under this sub-section within thirty days from the date of receipt of the application, the approval for diversion for use shall be deemed to have been granted by the Deputy Commissioner and the same shall certified and issued in the manner as may be prescribed subject to payment of fee prescribed under sub-section (7).

**XXX XXX XXX**

Govt. Press, Vikasa Soudha, Bengaluru, 19th July, 2023, P7, W.D. , Copies 300